<u>ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ</u>

ಸಿಸಿ ನಂ. 1413/2020

ಪ್ರಾಸಾ : 06
ಚಾಸಾ : 08

| | | |
|---|---|---|
| ಹೆಸರು | : | ನವೀನ್ |
| ತಂದೆಯ ಹೆಸರು | : | ಶೀನಾ ನಾಯ್ಕ |
| ಪ್ರಾಯ | : | 35 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ವಿಟ್ಲ ಕಸಬಾ ಗ್ರಾಮ |

ದಿಃ 13/01/2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

1. ನಿಪಿ 2 ಮಹಜರಿನಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸುಮಾರು ಎರಡು ವರ್ಷಗಳ ಹಿಂದೆ ಉಕ್ಕುಡದಲ್ಲಿರುವ ಸರೋಜಿನಿಯವರ ಮನೆಗೆ ಪೋಲಿಸರು ಬಂದಿದ್ದಾಗ ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದರು. ಸ್ಥಳದಲ್ಲಿ ನಾನು ಮತ್ತು ಚಂದ್ರಶೇಖರ್ ಇದ್ದೇವು. ನಿಪಿ 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.ಯಾವ ಉದ್ದೇಶಕ್ಕಾಗಿ ನನ್ನ ಸಹಿಗಳನ್ನು ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಎಪಿಪಿಯವರಿಂದಃ</u> -

2. ದಿಃ 21-05-2020 ರಂದು ಉಕ್ಕುಡದ ಬಿತ್ತಸಾರು ಎಂಬಲ್ಲಿ ಇದುವೇ ಕಳ್ಳತನ ಆದ ಕೊಟ್ಟಿಗೆ ಸ್ಥಳ ಎಂದು ಚಾಸಾ 1 ರವರು ತೋರಿಸಿಕೊಟ್ಟಂತೆ ಪೋಲಿಸರು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಹಜರ್ ಜರುಗಿಸಿದರು ಎಂದರೆ ಸರಿ. ಸದರಿ ದಾಖಲೆಗೆ ಚಾಸಾ 1 ರವರು ಸಹಿ ಮಾಡಿದರು ಎಂದರೆ ಗೊತ್ತಿಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ವಕೀಲರಿಂದ</u>

3. ತಕ್ಷೀರು ಸ್ಥಳಕ್ಕೆ ನಾನು ಹೋಗಿಲ್ಲ, ನಿಪಿ 2 ಕ್ಕೆ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ